ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ______

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ    ದಿನಾಂಕ : DATE 30/12/20

# ರೈಲ್ವೆ ಹಳಿ ಮೇಲೆ ಧರ್ಮೇಗೌಡರ ಶವ ಪತ್ತೆ

# ಉಪಸಭಾಪತಿ ಆತ್ಮಹತ್ಯೆ

30-12-2020

■ ವಿಜಯವಾಣಿ ಸುದ್ದಿಜಾಲ ಕಡೂರು

ವಿಧಾನಪರಿಷತ್ ಉಪಸಭಾಪತಿ ಎಸ್.ಎಲ್. ಧರ್ಮೇಗೌಡ ಅವರು ಸೋಮವಾರ ರಾತ್ರಿ ರೈಲಿಗೆ ಸಿಲುಕಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮೃತದೇಹದ ಜೇಬಿನಲ್ಲೇ ಸಿಕ್ಕಿತೆನ್ನಲಾದ ಡೆತ್‌ನೋಟ್‌ನಲ್ಲಿ ಮೇಲ್ಮನೆ ಘಟನೆ ಜತೆಗೆ ತಮ್ಮ ಆಸ್ತಿ ವಿವರ ದಾಖಲಿಸಿ, ಸೋಮವಾರವಷ್ಟೇ ಭೂಮಿಪೂಜೆ ಮಾಡಿರುವ ಮನೆ ನಿರ್ಮಾಣವನ್ನು ಪೂರ್ಣಗೊಳಿಸುವಂತೆ ಮಗನಿಗೆ ತಿಳಿಸಿದ್ದಾರೆನ್ನಲಾಗಿದೆ. ಈ ಘಟನೆ ರಾಜಕೀಯ ವಲಯದಲ್ಲಿ ದಿಗ್ಭ್ರಮೆ ಮೂಡಿಸಿದೆ.

» **ಕಡೂರು ತಾಲೂಕು ಗುಣಸಾಗರ ಗ್ರಾಮದ ಬಳಿ ಘಟನೆ**

» **ಸರಪನಹಳ್ಳಿ ತೋಟದಲ್ಲಿ ಸರ್ಕಾರಿ ಗೌರವಗಳೊಂದಿಗೆ ಅಂತ್ಯಕ್ರಿಯೆ**

ಮಂಗಳವಾರ ಶಿವಮೊಗ್ಗದಲ್ಲಿ ಪಾರ್ಥಿವ ಶರೀರದ ಮರಣೋತ್ತರ ಪರೀಕ್ಷೆ ಮುಗಿದ ನಂತರ ಸಖರಾಯಪಟ್ಟಣಕ್ಕೆ ಕೊಂಡೊಯ್ದು ಸರ್ಕಾರಿ ಕಾಲೇಜು ಆವರಣದಲ್ಲಿ ಸಾರ್ವಜನಿಕರ ಅಂತಿಮ ದರ್ಶನಕ್ಕೆ ಇಡಲಾಯಿತು. ನಂತರ ಸರಪನಹಳ್ಳಿಯಲ್ಲಿರುವ ತೋಟದ ಮನೆಯಲ್ಲಿ ಸರ್ಕಾರಿ ಗೌರವಗಳೊಂದಿಗೆ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಅವಿಶ್ವಾಸ ವಿಚಾರವಾಗಿ ಇತ್ತೀಚೆಗೆ ವಿಧಾನಪರಿಷತ್‌ನಲ್ಲಿ ನಡೆದ ಘಟನೆಯಿಂದ ತೀವ್ರವಾಗಿ ನೊಂದಿದ್ದ ಅವರು ಸೋಮವಾರ ಚಿಕ್ಕಮಗಳೂರಲ್ಲಿ ಶಾಸಕ ಸಿ.ಟಿ.ರವಿ ಅವರೊಂದಿಗೆ ಜಿಮ್ ಉದ್ಘಾಟನೆ ಮತ್ತು ಜಿಲ್ಲಾ ಯುವಜನೋತ್ಸವದಲ್ಲಿ ಪಾಲ್ಗೊಂಡಿದ್ದರು. ಬಳಿಕ ಸಖರಾಯಪಟ್ಟಣದಲ್ಲಿರುವ ತೋಟದ ಮನೆಗೆ ತೆರಳಿದ್ದರು.

ಸಂಜೆ ಖಾಸಗಿ ಡ್ರೈವರ್‌ನನ್ನು ಕರೆದುಕೊಂಡು ಬಾಣಾವರ ಕಡೆ ಹೊರಟ ಅವರು, ಪೆಟ್ರೋಲ್ ಬಂಕ್‌ನಲ್ಲಿ ಕಾರಿಗೆ ಪೆಟ್ರೋಲ್ ಹಾಕಿಸಿ ಬಂಕ್ ಮಾಲೀಕರೊಂದಿಗೂ ಕೆಲ ಸಮಯ ಮಾತನಾಡಿದ್ದಾರೆ. ಗುಣಸಾಗರ ಸಮೀಪ ಬಂದಾಗ ಆತ್ಮೀಯರೊಂದಿಗೆ ಖಾಸಗಿಯಾಗಿ ಮಾತನಾಡುವುದಿದೆ ನೀನು ಹೋಗು ಎಂದು ಡ್ರೈವರ್‌ನನ್ನು ಕಳುಹಿಸಿದ್ದಾರೆ. ಆತ್ಮಹತ್ಯೆ ಮಾಡಿಕೊಳ್ಳಲು ನಿರ್ಧರಿಸಿದ್ದ ಧರ್ಮೇಗೌಡರು, ಕಡೂರು ಪಟ್ಟಣದ ಸ್ನೇಹಿತರೊಬ್ಬರಿಗೆ ಕರೆ ಮಾಡಿ ಜನಶತಾಬ್ಧಿ ರೈಲು ಕಡೂರಿಗೆ ಎಷ್ಟು ಗಂಟೆಗೆ ಬರುತ್ತದೆ, ಎಷ್ಟೊತ್ತಿಗೆ ಹೊರಡುತ್ತದೆ ಎಂಬ ಮಾಹಿತಿ ಪಡೆದುಕೊಂಡಿದ್ದಾರೆ. ಮೊಬೈಲ್ ಕರೆಯ ಮಾಹಿತಿಗಳಲ್ಲಿ ಇದೇ ಕೊನೆಯ ಕರೆ. ನಂತರ ಮೊಬೈಲ್ ಸ್ವಿಚ್ ಆಫ್ ಆಗಿದೆ ಎಂದು ಗೊತ್ತಾಗಿದೆ. ರಾತ್ರಿ ಎಷ್ಟೊತ್ತಾದರೂ ಧರ್ಮೇಗೌಡರು ಮನೆಗೆ ಬಾರದಿದ್ದಾಗ ಅವರ ಮಗ ಡ್ರೈವರ್‌ಗೆ ಫೋನ್ ಮಾಡಿ ಎಲ್ಲಿದ್ದೀರಿ ಎಂದು ವಿಚಾರಿಸಿದ್ದಾರೆ. ತನ್ನನ್ನು ಬಿಟ್ಟು ಹೋದ ಬಗ್ಗೆ ಡ್ರೈವರ್ ಮಾಹಿತಿ ನೀಡಿದ ಬಳಿಕ ತಕ್ಷಣ ಹುಡುಕಾಟ ಆರಂಭಿಸಿ ಪೊಲೀಸರಿಗೆ ವಿಷಯ ತಿಳಿಸಿದ್ದಾರೆ. ಕೊನೆಯ ಮೊಬೈಲ್ ಕರೆಯ ಜಾಡು ಹಿಡಿದು ಹುಡುಕಾಟ ಆರಂಭಿಸಿದಾಗ ಗುಣಸಾಗರ ಸಮೀಪ ರೈಲ್ವೆ ಹಳಿ ಮೇಲೆ ಮೃತದೇಹ ಪತ್ತೆಯಾಗಿದೆ. ○ ಪುಟ 4



ತಂದೆಯ ಪಾರ್ಥಿವ ಶರೀರದ ಮುಂದೆ ಬಿಕ್ಕಳಿಸಿ ಅಳುತ್ತಿರುವ ಧರ್ಮೇಗೌಡರ ಮಕ್ಕಳು ಮತ್ತು ಸಹೋದರ ಭೋಜೇಗೌಡ.

## ಕೃಷಿಯಿಂದ ಅಸೆಂಬ್ಲಿವರೆಗೆ

- ಮೂಲತಃ ಕೃಷಿಕ ಕುಟುಂಬದವರಾದ ಧರ್ಮೇಗೌಡರ ಸೋದರ ಭೋಜೇಗೌಡ ಸಹ ವಿಧಾನ ಪರಿಷತ್ ಸದಸ್ಯರು
- 2004ರಲ್ಲಿ ಧರ್ಮೇಗೌಡರು ಬೀರೂರು ಕ್ಷೇತ್ರದಿಂದ ಸ್ಪರ್ಧಿಸಿ ಗೆದ್ದು ವಿಧಾನಸಭೆ ಪ್ರವೇಶಿಸಿದ್ದರು
- ಬೀರೂರು ಕ್ಷೇತ್ರ ರದ್ದಾದ ಬಳಿಕ 2013ರಲ್ಲಿ ಚಿಕ್ಕಮಗಳೂರು ಕ್ಷೇತ್ರದಲ್ಲಿ ಬಿಜೆಪಿಯ ಸಿ.ಟಿ.ರವಿ ವಿರುದ್ಧ ಸ್ಪರ್ಧಿಸಿ ಸೋತಿದ್ದರು

ಸಾರ್ವಜನಿಕ ಕ್ಷೇತ್ರದಲ್ಲಿದ್ದ ವ್ಯಕ್ತಿಯ ಸಾವಿನ ಕಾರಣ ತಿಳಿದುಕೊಳ್ಳುವ ಹಕ್ಕು ಎಲ್ಲರಿಗೂ ಇದೆ. ಮೇಲ್ಮನೆ ಮೇಲಾಟ ಮುಗಿದು 15 ದಿನ ಕಳೆದಿದೆ. ಅವರ ನಡೆ-ನುಡಿ ಗಮನಿಸಿದವರಿಗೆ ದುರ್ಬಲ ವ್ಯಕ್ತಿಯಲ್ಲ ಎಂಬುದು ಗೊತ್ತಿದೆ. ಹೀಗಾಗಿ ಯಾವ ಕಾರಣಕ್ಕೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬುದು ತನಿಖೆಯಿಂದ ಬಯಲಿಗೆ ಬರಬೇಕು.

| ಎಚ್.ಡಿ.ಕುಮಾರಸ್ವಾಮಿ ಮಾಜಿ ಸಿಎಂ